**ಈಜುಡುಗೆ ತೊಟ್ಟು ನಿಂತಿರುವ ಎಸ್ತರ್ ವಿಲ್ಲಿಯಮ್ಸ್‌ನ ರೂಪ ನೆನಪಿಗೆ ಬಂತು... ತುಂಬಿ ನೊರೆಯುವ ಲಿಕ್ಕರ್ ಹೌಸಿನ ಪಾನಪಾತ್ರೆಗಳು... ಸುಖಕರವಾದ ಲಹರಿಯ ತರಂಗಗಳು ರಕ್ತದಲ್ಲಿ ಏಳುತ್ತಿವೆ... ಮರೆಯಾಗುತ್ತಿವೆ.**

ಸಾರಿ ಬದಲಿಸಿ ಹೊರಗೆ ಬಂದು ಅಧಿಕಾರ ತುಳುಕುವ ಸ್ವರದಲ್ಲಿ ಅವಳು ಕರೆದಳು:

'ಲಕ್ಷ್ಮೀ'

ಲಕ್ಷ್ಮಿ ಏಣಿಮೆಟ್ಟಿಲುಗಳನ್ನು ಗುಡಿಸುತ್ತಿದ್ದಳು. ಅವಳು ಹಿಂತಿರುಗಿ ನೋಡಿದಳು.

'ನನಗೆ ಕಾಫಿ ಇಲ್ಲಿಗೆ ತಂದರೆ ಸಾಕು...'

ತಂಗಿಯ ನೇರಕ್ಕೆ ಜಿಗಿದೆದ್ದೆ.

'ಓ, ದೊಡ್ಡ ಮೇಡಮ್ ಬಂದಿದ್ದಾಳೆ. ಏನು ಕೆಳಗೆ ಹೋಗಿ ಕಾಫಿ ಕುಡಿದರೆ...'

'ಅಣ್ಣ, ನಿನಗೆ ಮಾತ್ರವೇ ಮೇಲಕ್ಕೆ ತಂದುಕೊಡಬಹುದೇನು... ದೊಡ್ಡ ಸಾಹೇಬ ಬಂದಿದ್ದಾನೆ...'

ಅವಳು ದಡಬಡನೆ ಮೆಟ್ಟಿಲುಗಳನ್ನಿಳಿದು ಹೋದಳು.

ಜಗಳಾಡುತ್ತಾಳಾದರೂ ಪ್ರೀತಿಯುಳ್ಳ ತಂಗಿಯವಳು. ಸಹೋದರ ಸಹೋದರಿಯಾಗಿ ತನಗಿರುವುದು ಅವಳೊಬ್ಬಳೇ. ಅವಳು ಮೂರು ವರ್ಷದವಳಾಗಿದ್ದಾಗ ಅಮ್ಮ ತೀರಿಕೊಂಡರು. ಹಾಗಾಗಿ ಅತ್ಯಂತ ಮುದ್ದಿನಿಂದ ಅಪ್ಪ ಅವಳನ್ನು ಬೆಳೆಸಿದರು.

ಮಿತ್ರಾ, ನಾನು ಘಟನೆಗಳನ್ನು ಹೆಚ್ಚು ವಿವರಿಸುವುದಿಲ್ಲ. ಮೂರು ನಾಲ್ಕು ದಿನಗಳ ನಿರಂತರ ಪ್ರಯತ್ನದ ಫಲವಾಗಿ ಒಂದು ದಿನ ಲಕ್ಷ್ಮೀಯನ್ನು ನಾನು ಅಧೀನವಾಗಿಸಿದೆ. ರಾತ್ರಿ ಎಲ್ಲರೂ ನಿದ್ರಿಸಿದ್ದಾಗ ಕಳ್ಳಬೆಕ್ಕಿನಂತೆ ಮೆಲ್ಲನೆ ಅವಳು ನನ್ನ ಕೋಣೆಗೆ ಬಂದಳು... ಅವಳು ನನ್ನ ಮಾತನ್ನು ಅನುಸರಿಸಿದಳು.

ಮರುದಿನ ನಾನವಳನ್ನು ಕಂಡೆನು. ಒಂದು ವಿಷಾದಭಾವ ಅವಳ ಮುಖದಲ್ಲಿತ್ತು. ಅವಳು ತಲೆತಗ್ಗಿಸಿ ಹೊರಟು ಹೋದಳು.

★★★

ಇಂದು!

ಶಾಂತಳ ಹುಟ್ಟುಹಬ್ಬ. ಲಕ್ಷ್ಮಿಗೆ ಅಡುಗೆ ಕೋಣೆಯಲ್ಲಿ ತುಂಬಾ ಕೆಲಸಗಳಿದ್ದುವು. ಮಧ್ಯಾಹ್ನ ದೊಡ್ಡದೊಂದು ಔತಣವಿತ್ತು. ಅಪ್ಪನ ಸ್ನೇಹಿತರು, ನೆರೆಮನೆಯವರೆಲ್ಲ ಬಂದಿದ್ದರು.

ಹೆಚ್ಚು ಹೊತ್ತನ್ನು ನನ್ನ ಕೋಣೆಯೊಳಗೇ ಕಳೆದೆ. ಈ ನಡುವೆ ಹೊರಗಡೆಗೆ ಹೋಗುವುದೆಂದಿಲ್ಲ. ಸಿನಿಮಾ ಚಿತ್ರಗಳನ್ನು ನೋಡಿ ಆಸ್ವಾದಿಸುವುದು... ಫ್ರೆಂಚ್ ಫೋಟೊ ಅಲ್ಬಂ ಬಿಡಿಸಿ ನೋಡುವುದು... ಹಾಗೆ ಸಮಯ ಸಾಗುತ್ತಿತ್ತು.

ನಡು ನಡುವೆ ಏನಾದರೂ ಕೀಟಲೆಯ ಮಾತನಾಡಲು ಶಾಂತಾ ಬರುತ್ತಿದ್ದಳು.

ಹುಟ್ಟುಹಬ್ಬವಾಗಿದ್ದರಿಂದ ರೇಷ್ಮೆಯುಡುಗೆ ಜರಿವಸ್ತ್ರ ಇತ್ಯಾದಿಗಳಿಂದ ಅವಳು ಸಂಭ್ರಮದಿಂದ ಓಡಾಡಿಕೊಂಡಿದ್ದಳು...